**ಓ.ಎಸ್.47/2025, ಪಿ.ಡಬ್ಲ್ಯೂ-1 ಹೆಸರುಃ ಜ್ಯೋತಿ**

**ದಿಃ13-10-2025 ರಂದು ಸಾಕ್ಷಿದಾರರು ಹಾಜರಿದ್ದು, ಪ್ರಮಾಣ ವಚನ ಬೋಧಿಸಲಾಯಿತು**

**ಮುಖ್ಯ ವಿಚಾರಣೆಃ ವಾದಿಯ ಪರ ಶ್ರೀ ಹೆಚ್.ಓ.ವಿ. ವಕೀಲರಿಂದಃ**

ನಾನು ನನ್ನ ಪ್ರಮಾಣ ಪತ್ರಿಕೆಯನ್ನು ಸಲ್ಲಿಸಿರುತ್ತೇನೆ. ಇದರಲ್ಲಿರುವ ಎಲ್ಲಾ ಸಂಗತಿಗಳು ಸತ್ಯವಾಗಿರುತ್ತದೆ. ಪ್ರಮಾಣ ಪತ್ರದಲ್ಲಿ ಇರುವ ಸಹಿಗಳು ನನ್ನದೇ ಆಗಿರುತ್ತದೆ.

ನಮ್ಮ ಕುಟುಂಬಕ್ಕೆ ಸಂಬಂಧಿಸಿದ ನೋಟರಿ ದೃಡೀಕೃತ ವಂಶವೃಕ್ಷವನ್ನು ಹಾಜರುಪಡಿಸಿದ್ದು ನಿಪಿ.1 ಎಂದು ಗುರುತಿಸಲಾಯಿತು. ದಾವಾ ಅನುಸೂಚಿತ 1 ರಿಂದ 9 ನೇ ಖಂಡಿಕೆಯ ಸ್ವತ್ತುಗಳಿಗೆ ಸಂಬಂಧಿಸಿದ ಪಹಣಿಗಳನ್ನು ಹಾಜರುಪಡಿಸಿದ್ದು ನಿಪಿ.2 ರಿಂದ 10 ಎಂದು ಗುರುತಿಸಲಾಯಿತು. ತುಪ್ಪದಹಳ್ಳಿ ಗ್ರಾಮದ ಎಂ.ಆರ್.52/2010-11, 57/2010-11, ಎಂ.ಆರ್.ಟಿ.29/2019-20, ಎಂ.ಆರ್.ಹೆಚ್.20/2016-17, ಎಂ.ಆರ್.ಹೆಚ್.56/2020-21, ಎಂ.ಆರ್.ಹೆಚ್.57/2020-21 ರ ಗಣಕೀಕೃತ ದೃಡೀಕೃತ ಪ್ರತಿಗಳನ್ನು ಹಾಜರುಪಡಿಸಿದ್ದು ನಿಪಿ.11 ರಿಂದ 16 ಎಂದು ಗುರುತಿಸಲಾಯಿತು. ದಿನಾಂಕ 12.09.2011 ರ ನೋಂದಣಿ ಕ್ರಯಪತ್ರದ ಗಣಕೀಕೃತ ದೃಡೀಕೃತ ಪ್ರತಿಯನ್ನು ಮತ್ತು ದಿನಾಂಕ 03.03.2021 ರ ನೋಂದಣಿ ಕ್ರಯಪತ್ರದ ದೃಡೀಕೃತ ಗಣಕೀಕೃತ ದೃಡೀಕೃತ ಪತ್ರಗಳನ್ನು ಹಾಜರುಪಡಿಸಿದ್ದು ನಿಪಿ.17 ರಿಂದ 19 ಎಂದು ಗುರುತಿಸಲಾಯಿತು.

**ಪ್ರತಿವಾದಿಯರು ಪ್ರತಿವಾದ ಪತ್ರ ಸಲ್ಲಿಸಿರುವುದಿಲ್ಲ, ಆದಾಗ್ಯೂ ದಾಖಲಾತಿಗಳಿಗೆ ಸಂಬಂಧಿಸಿದಂತೆ ಪಾಟೀ ಸವಾಲಿಗಾಗಿ ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ತಕ್ಕಂತೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ., ಹೊಳಲ್ಕೆರೆ